**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿವಮೊಗ್ಗ.**

| **ಸಿ.ಸಿ. ಸಂಖ್ಯೆ: 4524/22** | | | |
|---|---|---|---|
| ಸಾಕ್ಷಿದಾರರ ಹೆಸರು | ಇಂತಿಯಾಜ್ | CW : 1 | PW :1 |
| ತಂದೆಯ ಹೆಸರು | ಅಬ್ದುಲ್ ಗಫುರ್ ಸಾಬ್ | | |
| ವಯಸ್ಸು | 50 ವರ್ಷ | | |
| ಉದ್ಯೋಗ | ಕೂಲಿ | | |
| ವಾಸ | ರಾಮನಗರ | ದಿನಾಂಕಃ 17.02.2023 ರಂದು ಪ್ರಮಾಣವಚನ ಭೋದಿಸಲಾಯಿತು. | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ವಕೀಲರಿಂದ:**

ಚಾಸಾ2 ನನ್ನ ಅಳಿಯ, ಚಾಸಾ5 ನನ್ನ ಹೆಂಡತಿ, ಚಾಸಾ6 ನನ್ನ ಮಗಳು, ಚಾಸಾ7 ನನಗೆ ಗೊತ್ತು. ಆರೋಪಿತರು ನನ್ನ ಸಂಬಂಧಿ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ , ಚಾಸಾ5, 6 ಮತ್ತು ಆರೋಪಿತರ ನಡುವೆ ಯಾವುದೇ ಜಗಳ ನಡೆದಿರುವುದಿಲ್ಲ. ಆರೋಪಿತರು ಎಂದು ನನ್ನನ್ನು, ಚಾಸಾ5, 6 ರವರನ್ನು ಹೊಡೆದಿರುವುದಿಲ್ಲ, ಬೈದಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ.

ಸಾಕ್ಷಿ ಒಂದು ದಾಖಲೆಯನ್ನು ನೋಡಿ ತನ್ನ ಸಹಿ ಗುರುತಿಸಿದ ಮೇರೆಗೆ ದಾಖಲೆಯನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಿಪಿ-1 ಹೇಳಿಕೆ ದೂರು ಆಗಿರುತ್ತದೆ. ನಾನು ನನ್ನ ವೈಯಕ್ತಿಕ ವಿಚಾರಕ್ಕೆ ಆಸ್ಪತ್ರೆಗೆ ಹೋದಾಗ ಪೊಲೀಸರ ಹೇಳಿಕೆ ಮೇರೆಗೆ ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅರವರು ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ- ಸಹಾಯಕ ಸರ್ಕಾರಿ ವಕೀಲರಿಂದ:

ದಿಃ 31.01.2021 ರಂದು ಬೆಳಗ್ಗೆ 8 ಕ್ಕೆ ನೀವು 1 ನೇ ಆರೋಪಿಯವರಿಗೆ ಮನೆಯ ಮುಂದಿನ ನಲ್ಲಿಯ ನೀರನ್ನು ನಿಲ್ಲಿಸುವುದಕ್ಕೆ ಹೇಳಿದ ಕಾರಣ 1 ನೇ ಆರೋಪಿ ನಿಮ್ಮನ್ನು ಅವಾಚ್ಯ ಶಬ್ದಗಳಿಂದ ಬೆಎದು , ಗುದ್ದಲಿಯಿಂದ ತಲೆಗೆ , ಭುಜಕ್ಕೆ ಹೊಡೆದು ರಕ್ತಗಾಯಪಡಿಸಿದ್ದು , 2 ನೇ ಆರೋಪಿ ಕೈಯಿಂದ ನಿಮ್ಮ ಮೈಮೇಲೆ, ಮೈಕೈಗೆ ಗುದ್ದಿದ್ದು

, ಜಗಳ ಬಿಡಿಸಲು ಬಂದ ಚಾಸಾ5 ಮತ್ತು 6 ರವರಿಗೆ 3 ನೇ ಆರೋಪಿ ಚಾಸಾ5 ರವರ ಕೈ ತಿರುವಿದ್ದು , ಚಾಸಾ6 ರವರಿಗೆ ತೊಡೆಯ ಹತ್ತಿರ ಕಚ್ಚಿ ನೋವು ಉಂಟು ಮಾಡಿದ್ದು , ಆ ಸಂಬಂಧ ನೀವು ನಿಪಿ-1 ರಂತೆ ಪೊಲೀಸರಿಗೆ ಹೇಳಿಕೆ ದೂರು ನೀಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಗುದ್ದಲಿಯನ್ನು ತೋರಿಸಿ ಅದರಿಂದಲೇ 1 ನೇ ಆರೋಪಿ ನಿಮ್ಮ ತಲೆಗೆ, ಭುಜಕ್ಕೆ ಹೊಡೆದಿದ್ದು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಮುಂದೆ ದ್ವಂದ್ವ ಉಂಟಾಗಬಾರದೆಂದು ಸದರಿ ಗುದ್ದಲಿಯನ್ನು ಎಂಒ 1 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

2ನೇ ಎ.ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,
ಶಿವಮೊಗ್ಗ.